**ಕರ್ನಾಟಕ ಸರ್ಕಾರ**

ಸಂಖ್ಯೆ:ಗಭೂಇ/ಉನಿ(ಖ.ಆ)/ಕಗಗು/ತಿ.ನಿ-01/2022-23

ನಿರ್ದೇಶಕರ ಕಛೇರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಂ.49 ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-01, ದಿ:20-03-2023.

**ಸುತ್ತೋಲೆ**

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ರನ್ವಯ ಉಪಖನಿಜ ಗಣಿ ಗುತ್ತಿಗೆದಾರರಿಂದ ಹೆಚ್ಚುವರಿ ಪಾವತಿಯನ್ನು ಸಂಗ್ರಹಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/2022 ದಿನಾಂಕ: 17-03-2023.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ನ್ನು ದಿ:17-03-2023 ರಂದು ಜಾರಿಗೆ ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮ- 2(1)(a-b) ರನ್ವಯ ಹೆಚ್ಚುವರಿ ಪಾವತಿ ಮೊತ್ತವನ್ನು ಸಂಗ್ರಹಿಸಲು ನಿಯಮ ರೂಪಿಸಿದೆ.

1. ಸರ್ಕಾರಿ ಒಡೆತನದ ಜಮೀನುಗಳಲ್ಲಿ ಹರಾಜು ರಹಿತವಾಗಿ ಗುತ್ತಿಗೆ ಹೊಂದಿರುವ ಕಲ್ಲುಗಣಿ ಗುತ್ತಿಗೆದಾರರು, ನಿಯಮ-3-A(a) ಮತ್ತು 3-A(b) ರಡಿ ಕಾರ್ಯಾದೇಶ ನೀಡುವ ಕಾರ್ಯಾನುಮತಿದಾರರು ಮತ್ತು ಪಟ್ಟಾ ಜಮೀನುಗಳ ಮರಳು ಗಣಿಗುತ್ತಿಗೆದಾರರಿಂದ ಗುತ್ತಿಗೆ ಪ್ರದೇಶದಲ್ಲಿ ಉತ್ಪಾದಿಸಿ, ಸಾಗಾಣಿಕೆ ಮಾಡುವ ಉಪಖನಿಜದ ಪ್ರಮಾಣಕ್ಕೆ ಶೆಡ್ಯೂಲ್- II ರಲ್ಲಿ ನಿಗಧಿಪಡಿಸಿರುವ ರಾಜಧನ ಮತ್ತು ರಾಜಧನದ ಶೇಕಡ 40 ರಷ್ಟು ಹೆಚ್ಚುವರಿ ಪಾವತಿಯನ್ನು ಸಂಗ್ರಹಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ರೀತಿ ಹೆಚ್ಚುವರಿ ಪಾವತಿ ಸಂಗ್ರಹಿಸುವ ಪ್ರಕರಣಗಳಲ್ಲಿ ರಾಜಧನ ಶೇಕಡ 10 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆಯನ್ನಾಗಿ ಸಂಗ್ರಹಿಸತಕ್ಕದ್ದು.
2. ಈಗಾಗಲೇ ಹರಾಜು ಮೂಲಕ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಪಡೆದಿರುವ ಗುತ್ತಿಗೆದಾರರಿಗೆ ರಾಜಧನ, ಹೆಚ್ಚುವರಿ ನಿಯತಕಾಲಿಕ ಸಂದಾಯದ ಮೊತ್ತ (APP) ಮತ್ತು ರಾಜಧನ ಶೇಕಡ 10 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆಯನ್ನಾಗಿ ಸಂಗ್ರಹಿಸತಕ್ಕದ್ದು.
3. ಹೆಚ್ಚುವರಿ ಪಾವತಿ ಮೊತ್ತದ ಸಂಗ್ರಹಣೆಯು ನಿಯಮ-3-F ರಡಿ ಹಾಗೂ ನಿಯಮ-32 ರಡಿ ಮಂಜೂರು ಮಾಡುವ ಉಪಖನಿಜ ಗಣಿ ಗುತ್ತಿಗೆ/ಲೈಸೆನ್ಸ್‌ಗಳಿಗೆ ಅನ್ವಯಿಸತಕ್ಕದ್ದಲ್ಲ. ಈ ಪ್ರಕರಣಗಳಲ್ಲಿ ರಾಜಧನ ಶೇಕಡ 30 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆಯನ್ನಾಗಿ ಸಂಗ್ರಹಿಸಲು ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು

**ಇವರಿಗೆ,**

1. ಹೆಚ್ಚುವರಿ ನಿರ್ದೇಶಕರು, ಉತ್ತರ ವಲಯ, ಬಳ್ಳಾರಿ ಮತ್ತು ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಮೈಸೂರು ರವರ ಮಾಹಿತಿಗಾಗಿ.

2. ಉಪ ನಿರ್ದೇಶಕರು, ಆರ್ & ಡಿ ಮತ್ತು ನೋಡಲ್ ಅಧಿಕಾರಿ, ಇ-ಸೆಲ್, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
3. ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಗ್ರಾಮಾಂತರ/ಬೆಳಗಾವಿ/ ಚಿತ್ರದುರ್ಗ/ ವಿಜಯನಗರ/ದಕ್ಷಿಣ ಕನ್ನಡ/ ಕಲಬುರಗಿ/ ಚಾಮರಾಜನಗರ/ ಬಾಗಲಕೋಟೆ/ ರಾಮನಗರ/ ತುಮಕೂರು ಜಿಲ್ಲೆ ಇವರ ಸೂಕ್ತ ಕ್ರಮಕ್ಕಾಗಿ.
4. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ನಗರ / ಬಳ್ಳಾರಿ/ ವಿಜಯಪುರ/ ಚಿಕ್ಕಬಳ್ಳಾಪುರ/ ಕೊಡಗು/ಚಿಕ್ಕಮಗಳೂರು/ಧಾರವಾಡ/ ಹಾಸನ/ ಕೋಲಾರ / ಮಂಡ್ಯ/ ಮೈಸೂರು/ ಶಿವಮೊಗ್ಗ/ ಕೊಪ್ಪಳ/ ದಾವಣಗೆರೆ/ ಗದಗ / ಹಾವೇರಿ/ ರಾಯಚೂರು/ ಬೀದರ್/ ಯಾದಗಿರಿ/ ಉಡುಪಿ/ ಉತ್ತರ ಕನ್ನಡ ಜಿಲ್ಲೆ ಇವರ ಸೂಕ್ತ ಕ್ರಮಕ್ಕಾಗಿ.